**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಉನ್ನತ ಎ.ಜಿ.ಪಿ. (Higher AGP) ಮಂಜೂರಾತಿ ಬಗ್ಗೆ.

**ಉಲ್ಲೇಖ:**
1 ಸರ್ಕಾರಿ ಆದೇಶ ಸಂಖ್ಯೆ: ಇಡಿ 37 ಯುಎನ್ಇ 2009, ದಿ:24.12.2009.
2 ಯು.ಜಿ.ಸಿ. ನಿಯಮಗಳ ಆದೇಶ ಸಂಖ್ಯೆ: ಎಫ್3-1/ 2009, ದಿ:30.06.2010.
3 ಯು.ಜಿ.ಸಿ. ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್1.2/ 2009 (EC/PS)V(i)vol-II. ದಿ:14.06.2013 ರೊಂದಿಗೆ ಲಗತ್ತಿಸಿರುವ ದಿ:13.06.2013ರ ಯು.ಜಿ.ಸಿ. ನಿಯಮಗಳ ತಿದ್ದುಪಡಿ ಆದೇಶ
4 ಸರ್ಕಾರಿ ಆದೇಶ ಸಂಖ್ಯೆ: ಇಡಿ 382 ಯುಎನ್ಇ 2012, ದಿ:25.09.2014.
5 ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ/200/ ಯುಎನ್ಇ/2003, ದಿ:19.09.2007.
6 ಸರ್ಕಾರದ ಪತ್ರ ಸಂಖ್ಯೆ:ಇಡಿ/242/ಡಿಸಿಇ/2011, ದಿ:19.12.2011 ಮತ್ತು ದಿ:05.05.2015.
7 ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/27/ ಸಿಎಎಸ್/2010-11/ಬಸ್ಥಾವಿ, ದಿ:19.05.2015 ಹಾಗೂ ಕಾಶಿಇ/16/ಸಿಎಎಸ್/2015-16/ಬಸ್ಥಾವಿ, ದಿ:03.10.2015, 31.10.2015
8 ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಾಂಶುಪಾಲರ ಹಂತದ ಪರಿಶೀಲನಾ ಸಮಿತಿಯ ವರದಿಗಳು.

* * * *

**<u>ಪ್ರಸ್ತಾವನೆ :</u>**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಉಲ್ಲೇಖ (1)ರನ್ವಯ 2006ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ (ರೂ.15,600-39,100) ಎ.ಪಿ.ಐ. ಆಧಾರಿತ ಉನ್ನತ ಎ.ಜಿ.ಪಿ.ಗೆ ಅವಕಾಶ ಕಲ್ಪಿಸಲಾಗಿರುತ್ತದೆ. ನಂತರ ಉಲ್ಲೇಖ(2)ರ ಯು.ಜಿ.ಸಿ. ನಿಯಮಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದರಲ್ಲಿನ

ಸಹಾಯಕ ಪ್ರಾಧ್ಯಾಪಕರುಗಳ ಎ.ಪಿ.ಐ. ಸಂಬಂಧದ ಅನುಬಂಧ-3ರ ಟೇಬಲ್-1ರ ಕೆಟಗರಿ I, II ಮತ್ತು III ಗಳಿಗೆ ಉಲ್ಲೇಖ(3)ರಲ್ಲಿ ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ. ಆದರೆ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಉಲ್ಲೇಖ (2)ರಲ್ಲಿನ ಮಾರ್ಗಸೂಚಿಗಳು ಮುಂದುವರೆದಿರುತ್ತವೆ.

ಸರ್ಕಾರ, ಯು.ಜಿ.ಸಿ.ಯ ಉಲ್ಲೇಖ (1) ರಿಂದ (3)ರವರೆಗಿನ ಆದೇಶಗಳನ್ವಯ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಎ.ಪಿ.ಐ. ಅಂಕಗಳ ಆಧಾರಿತ ವೃತ್ತಿಪದೋನ್ನತಿ (Career Advancement Scheme) ಮಂಜೂರು ಮಾಡಲು ಉಲ್ಲೇಖ (4)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (6) ರವರೆಗಿನ ಯುಜಿಸಿ, ಸರ್ಕಾರದ ಆದೇಶ ಮತ್ತು ಪತ್ರಗಳನ್ವಯ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ರೂ. 7000/- ಹಾಗೂ ರೂ.8000/-ಎ.ಜಿ.ಪಿ. ಮಂಜೂರಾತಿ ಸಂಬಂಧದಲ್ಲಿ ಪ್ರಾಂಶುಪಾಲರು ತಮ್ಮ ಹಂತದಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶದ ನಿಯಮ 20.03.2 ರಂತೆ ವಿಭಾಗದ ಮುಖ್ಯಸ್ಥರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಯನ್ನೊಳಗೊಂಡಂತೆ ಸಮಿತಿಯನ್ನು ರಚಿಸಿಕೊಂಡು ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಬಂಧಿಸಿದಂತೆ ಟೇಬಲ್-1, ದೈಹಿಕ ಶಿಕ್ಷಣ ಬೋಧಕರುಗಳಿಗೆ ಸಂಬಂಧಿಸಿದಂತೆ ಟೇಬಲ್-4 ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಟೇಬಲ್-7 (Category-1,2,3) ನಮೂನೆ, ಪ್ರಮಾಣ ಪತ್ರಗಳು ಹಾಗೂ ದಾಖಲಾತಿಗಳನ್ನು ಟೇಬಲ್-2, 5(ಬಿ), 8(ಬಿ) ಮತ್ತು ಟೇಬಲ್-3, 6, 9 ಗಳನ್ವಯ ಕೂಲಂಕುಷವಾಗಿ ಪರಿಶೀಲಿಸಿ, ಎ.ಪಿ.ಐ. ಅಂಕಗಳನ್ವಯ ಉನ್ನತ ಎ.ಜಿ.ಪಿ.ಗೆ ಅರ್ಹರಿರುವವರ ಮಾಹಿತಿಗಳನ್ನು ಮಾತ್ರ ನಿಗದಿತ ನಮೂನೆ-1 ಮತ್ತು 2 ರಲ್ಲಿ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸುವಂತೆ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ತಿಳಿಸಲಾಗಿದೆ. ಅದರನ್ವಯ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ಉನ್ನತ ಎ.ಜಿ.ಪಿಗಾಗಿ ಶಿಫಾರಸ್ಸು ಮಾಡಿರುತ್ತಾರೆ. ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಇಲಾಖಾ ಸಿ.ಎ.ಎಸ್ ಸಮಿತಿಯ ತೀರ್ಮಾನದನ್ವಯ ಎ.ಜಿ.ಪಿ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ ಬೆಂಗಳೂರು, ದಿನಾಂಕ : 07.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರಿ ಆದೇಶ ಸಂಖ್ಯೆ:ಇಡಿ/382/ಯುಎನ್ಇ/2012, ದಿ:25.09.2014ರ ಅನುಮೋದನೆಯನ್ವಯ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಇಲಾಖಾ ಸಿ.ಎ.ಎಸ್ ಸಮಿತಿಯ ತೀರ್ಮಾನದನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ರನ್ವಯ ರೂ.7000/- ಎ.ಜಿ.ಪಿಯನ್ನು ಹಾಗೂ ಅನುಬಂಧ-2ರನ್ವಯ ರೂ.8000/- ಎ.ಜಿ.ಪಿಯನ್ನು (2006ರ ಯು.ಜಿ.ಸಿ. ವೇತನ ಶ್ರೇಣಿ ರೂ.15600-39100 ರಲ್ಲಿ) ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಅನ್ವಯವಾಗುವಂತೆ 2006ರ ಯುಜಿಸಿ ವೇತನ ಶ್ರೇಣಿಗಳಡಿಯಲ್ಲಿ ಎ.ಜಿ.ಪಿ ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು :**

1. 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿನ ಎ.ಪಿ.ಐ ಆಧಾರಿತ ಎ.ಜಿ.ಪಿ ಮಂಜೂರಾತಿಯು ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ/ಸರ್ಕಾರದ ಆದೇಶಗಳಲ್ಲಿನ ನಿಯಮಗಳ ನಿಬಂಧನೆಗಳೊಪಟ್ಟಿರುತ್ತದೆ.

2. APPENDIX-III, Table-I, IV, VII (Category I, II & III) ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಪ್ರಾಂಶುಪಾಲರ ಹಂತದ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವ ಮೇರೆಗೆ ಎ.ಜಿ.ಪಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು. ಮತ್ತು ತಪ್ಪು ಮಾಹಿತಿ ಒದಗಿಸಿದ ಉಪನ್ಯಾಸಕರು ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

3. ಉಲ್ಲೇಖ (5) ಹಾಗೂ (6)ರನ್ವಯ ನೇಮಕಾತಿಗೆ ಅಥವಾ ವಿಶೇಷ ಮುಂಗಡ ವೇತನ ಬಡ್ತಿ ಇವುಗಳಲ್ಲಿ ಯಾವುದಾದರೂ ಒಂದು ಸೌಲಭ್ಯಕ್ಕೆ ಎಂ.ಫಿಲ್/ಪಿ.ಹೆಚ್.ಡಿ.ಯನ್ನು ಪರಿಗಣಿಸಿದ್ದಲ್ಲಿ ಸಿ.ಎ.ಎಸ್‌ರಡಿಯಲ್ಲಿ ಉನ್ನತ ಎ.ಜಿ.ಪಿ ಸೌಲಭ್ಯಕ್ಕೆ ಸೇವಾವಧಿಯ ವಿನಾಯಿತಿಗೆ ಅವಕಾಶವಿರುವುದಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಉನ್ನತ ಎ.ಜಿ.ಪಿ.ಗೆ ಶಿಫಾರಸ್ಸು ಮಾಡುವ ಜವಾಬ್ದಾರಿ ಸಮಿತಿಯದ್ದಾಗಿದ್ದು, ಈ ಆದೇಶದನ್ವಯ ಉನ್ನತ ಎ.ಜಿ.ಪಿ ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರುಗಳು ಎಂ.ಫಿಲ್/ಪಿ.ಹೆಚ್.ಡಿಯನ್ನು ವಿಶೇಷ ಮುಂಗಡ ವೇತನ ಬಡ್ತಿ ಮತ್ತು ಎ.ಜಿ.ಪಿ ಎರಡೂ ಸೌಲಭ್ಯಗಳನ್ನು ಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದೊಮ್ಮೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಶಿಸ್ತುಕ್ರಮವನ್ನು ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

4. ಎ.ಜಿ.ಪಿ.ಗೆ ಸೇವಾ ವಿನಾಯಿತಿ ಪಡೆದಿರುವ ಸಹಾಯಕ ಪ್ರಾಧ್ಯಾಪಕರಿಂದ ಮುಂಗಡ ವೇತನ ಬಡ್ತಿ ಸೌಲಭ್ಯ ಪಡೆದಿರುವುದಿಲ್ಲವೆಂಬ ಬಗ್ಗೆ ಹಾಗೂ ಮುಂದೆಯೂ ಪಡೆಯುವುದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು. ಹಾಗೂ ದೃಢೀಕರಣದ ವಿವರಗಳನ್ನು ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು ಹಾಗೂ ಸದರಿ ಪತ್ರದ ದೃಢೀಕೃತ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

5. ಎಂ.ಫಿಲ್/ಪಿಹೆಚ್.ಡಿ. ಪ್ರಯುಕ್ತ ಮುಂಗಡ ವೇತನ ಬಡ್ತಿ ಮಂಜೂರಾಗಿದ್ದಲ್ಲಿ ಅಥವಾ ಅರ್ಜಿ ಸಲ್ಲಿಸಿದ್ದಲ್ಲಿ ಸದರಿ ಆದೇಶ/ಪ್ರಕ್ರಿಯೆ ರದ್ದುಗೊಂಡ ನಂತರ ಎ.ಜಿ.ಪಿ. ವಿನಾಯಿತಿಗೆ ಪರಿಗಣಿಸಬೇಕಾಗಿರುತ್ತದೆ.

6. ಈ ಕಛೇರಿಯ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಸಹಾಯಕ ಪ್ರಾಧ್ಯಾಪಕರುಗಳ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ. ವೇತನ ನಿಗಧೀಕರಣದ ದಿನಾಂಕ, ಸೇವಾ ಪೂರ್ವ ಅವಧಿಯ ಘೋಷಣೆ ದಿನಾಂಕ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಶಿಸ್ತು ಕ್ರಮದ ಮಾಹಿತಿ, ನಿಗದಿತ ರಿಫ್ರೆಷರ್/ಓರಿಯಂಟೇಷನ್ ಕೋರ್ಸ್‌ಗಳನ್ನು ಪೂರೈಸಿರುವುದು, ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಸಮಿತಿಯು ಪರಿಶೀಲಿಸಿರುವ ಷರತ್ತಿಗೊಳಪಟ್ಟಿರುತ್ತದೆ.

7. ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಎ.ಜಿ.ಪಿ ಪ್ರಸ್ತಾವನೆಗಳನ್ನು ಕಾಲೇಜಿನ ಹಂತದ ಸಮಿತಿಯ ಪರಿಶೀಲನೆಯ ನಂತರ ಪ್ರಸ್ತಾವನೆ, ಸಮಿತಿಯ ಶಿಫಾರಸ್ಸು, ಎ.ಜಿ.ಪಿ ಮಂಜೂರಾತಿ ಆದೇಶ ಹಾಗೂ ಇನ್ನಿತರೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿ ಸಂರಕ್ಷಿಸಲು ತಿಳಿಸಲಾಗಿದೆ. ಈ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳಿಗೆ ಸಹ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿ ಮಂಜೂರಾತಿ ಸಂಬಂಧದಲ್ಲಿ ಇಲಾಖೆಯ ಪರಿಶೀಲನಾ ಸಮಿತಿ (Screening-cum-Evaluation Committee) ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸದರಿ ದಾಖಲಾತಿಗಳನ್ನು ಸಮಿತಿಯ ಪರಿಶೀಲನೆಗೆ ಮಂಡಿಸಬೇಕಾಗಿರುತ್ತದೆ. ಆದುದರಿಂದ ಎ.ಜಿ.ಪಿ ಮಂಜೂರಾತಿಗೆ ಸಂಬಂಧಿಸಿದಂತೆ ಯಾವುದೇ ತಪ್ಪು ಮಾಹಿತಿಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರು ಹಾಗೂ ಪ್ರಾಂಶುಪಾಲರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

8. ದೂರ ಶಿಕ್ಷಣ ಮುಖೇನ (Distance Mode) ಎಂ.ಫಿಲ್ ಪಡೆದಿರುವ ಅಭ್ಯರ್ಥಿಗಳ ಆಯ್ಕೆ ಪ್ರಕರಣವು ಸರ್ವೋಚ್ಚ ನ್ಯಾಯಾಲಯದಲ್ಲಿ (ಎಸ್.ಎಲ್.ಪಿ ಸಂಖ್ಯೆ:35608-20/2013 ಮತ್ತು 36714-736-2013) ದಾಖಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ. ಹಾಗೂ ದೂರ ಶಿಕ್ಷಣ ಮುಖೇನ ಪಡೆದಿರುವ ಎಂ.ಫಿಲ್, ಪಿ.ಹೆಚ್.ಡಿ ಪದವಿಗಳ ಮಾನ್ಯತೆಗೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆಯ ಆದೇಶ/ ಸೂಚನೆಯನ್ವಯ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

9. ಎ.ಜಿ.ಪಿ ಮಂಜೂರಾತಿಯು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

10. ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿ (ಸಿ.ಎ.ಎಸ್-ಎ.ಜಿ.ಪಿ) ಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

11. ಈ ಆದೇಶದನ್ವಯ ಮಂಜೂರು ಮಾಡಲಾದ ಎ.ಜಿ.ಪಿ.ಯು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

12. ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಾತಿಗೊಂಡಿರುವ ಅರೆಕಾಲಿಕ ಉಪನ್ಯಾಸಕರು ಯು.ಜಿ.ಸಿ ನಿಗದಿಪಡಿಸಿರುವ ವಿದ್ಯಾರ್ಹತೆ (NET/SLET/M.PHIL/PH.D) ಪಡೆದಿರುವ ದಿನಾಂಕದಿಂದ ಯು.ಜಿ.ಸಿ ವೇತನ ಶ್ರೇಣಿ ನಿಗದಿಪಡಿಸಲಾಗಿರುವುದನ್ನು ಎ.ಜಿ.ಪಿ. ಪರಿಗಣಿಸಲಾಗಿದ್ದು, ಸದರಿ ದಿನಾಂಕದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

13. ಎನ್.ಇ.ಟಿ/ಎಸ್.ಎಲ್.ಇ.ಟಿ. ಹೊಂದಿದ್ದು/ಹೊಂದಿಲ್ಲದೇ ಎಂ.ಫಿಲ್ ಹಾಗೂ ಪಿ.ಹೆಚ್.ಡಿ. ಈ ಎರಡೂ ಪದವಿಗಳನ್ನು ಪಡೆದಿರುವ ಸಹಾಯಕ ಪ್ರಾಧ್ಯಾಪಕರು ಎಂ.ಫಿಲ್ ಹಾಗೂ ಪಿಹೆಚ್.ಡಿ.ಗಳಲ್ಲಿ ಒಂದು ಪದವಿಯನ್ನು ನೇಮಕಾತಿಗೆ ಅಥವಾ ಮುಂಬಡ್ತಿ ವೇತನ ಬಡ್ತಿ ಸೌಲಭ್ಯಕ್ಕೆ ಪರಿಗಣಿಸಿದ್ದಲ್ಲಿ, ಇನ್ನೊಂದು ಪದವಿಯನ್ನು ಎ.ಜಿ.ಪಿ.ಯಲ್ಲಿನ ಸೇವಾ /ವಿನಾಯಿತಿಗೆ

ಕೋರಿರುವಂತಹ ಪ್ರಕರಣಗಳಲ್ಲಿ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲಾಗಿದ್ದು, ಈ ಸಂಬಂಧದಲ್ಲಿ ಸರ್ಕಾರದಿಂದ ಹೊರಡಿಸಬಹುದಾದ ಆದೇಶ/ಮಾರ್ಗದರ್ಶನದನ್ವಯ ಕ್ರಮ ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

14. ಸಹಾಯಕ ಪ್ರಾಧ್ಯಾಪಕರುಗಳ ಎ.ಜಿ.ಪಿ ರೂ.7000/- ದಿಂದ 8000/- ಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ರೂ.7000/- ಎ.ಜಿ.ಪಿ.ಗೆ ನಿಗದಿಪಡಿಸಿರುವ ಒಂದು ಓ.ಸಿ ಮತ್ತು ಒಂದು ಆರ್.ಸಿ ಪೂರೈಸಿದ ದಿನಾಂಕದ ನಂತರ ರೂ.8000/- ಎ.ಜಿ.ಪಿಗೆ ಒಂದು ಆರ್.ಸಿ ಅಗತ್ಯವಿರುತ್ತದೆ. ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರಿಗೆ ರೂ.8000/- ಎ.ಜಿ.ಪಿ.ಗೆ ಎರಡು ಆರ್.ಸಿ ಅಗತ್ಯವಿರುತ್ತದೆ. ಸದರಿ ನಿಗದಿತ ಕೋರ್ಸ್‌ಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

15. ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಎ.ಜಿ.ಪಿ ಅನುಮೋದನೆಯ ವಿವರಗಳನ್ನು ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.

16. ಎ.ಜಿ.ಪಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ವೇತನ ನಿಗದೀಕರಣದ ಬಗ್ಗೆ ಅಗತ್ಯಕ್ರಮಕೈಗೊಳ್ಳತಕ್ಕದ್ದು.

17. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಹಾಗೂ ತಿದ್ದುಪಡಿ ನಿಯಮಗಳು 2015ರನ್ವಯ ಸರ್ಕಾರಿ ನೌಕರರು ಸರ್ಕಾರದಿಂದ ನಿಗದಿಪಡಿಸಲಾಗಿರುವ ಅಧಿಕೃತ ಏಜೆನ್ಸಿಯಾದ KEONICS ನಿಂದ ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗಿರುತ್ತದೆ. ಆದುದರಿಂದ ಈ ಆದೇಶದಲ್ಲಿ ಎ.ಜಿ.ಪಿ. ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪೂರೈಸತಕ್ಕದ್ದು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಹಾಗೂ ಈ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪೂರೈಸಿ ಸಲ್ಲಿಸುವಂತಹ ಪ್ರಮಾಣ ಪತ್ರಗಳನ್ನು ಅವರುಗಳ ಎ.ಜಿ.ಪಿ. ದಾಖಲಾತಿಗಳೊಂದಿಗೆ ಕಾಲೇಜಿನಲ್ಲಿ ಸಂರಕ್ಷಿಸುವಂತೆ ಪ್ರಾಂಶುಪಾಲರಿಗೆ ತಿಳಿಸಲಾಗಿದೆ.

*(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

Swlpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

1. ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ. ಮೇಲ್ಕಂಡ ಆದೇಶವನ್ನು ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಗಮನಕ್ಕೆ ತರುವಂತೆ ತಿಳಿಸಲಾಗಿದೆ.

(ಅ) ಅನುಬಂಧ-1 ಮತ್ತು 2 ರನ್ವಯ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳು ಉನ್ನತ ಎ.ಜಿ.ಪಿ.ಗೆ ವರದಿ ಮಾಡಿಕೊಂಡ ಬಗ್ಗೆ ಸಿ.ಟಿ.ಸಿ., ಅಂತಿಮ ವೇತನ ಪ್ರಮಾಣ ಪತ್ರಗಳೊಂದಿಗೆ ವೇತನ ನಿಗದೀಕರಣಕ್ಕಾಗಿ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 ಇವರಿಗೆ ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ. (ರೂ.7,000/- ಎ.ಜಿ.ಪಿ.ಯ ವೇತನ ನಿಗದೀಕರಣಕ್ಕಾಗಿ ಪ್ರಸ್ತಾವನೆಯೊಂದಿಗೆ ಸೇವಾ ಪುಸ್ತಕವನ್ನೂ ಸಹ ಮಹಾಲೇಖಪಾಲರ ಕಛೇರಿಗೆ ಸಲ್ಲಿಸತಕ್ಕದ್ದು)

(ಆ) ಅನುಬಂಧ-3 ರಲ್ಲಿ ನಮೂದಿಸಿರುವ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಎ.ಜಿ.ಪಿ ಮಂಜೂರಾತಿ ಸಂಬಂಧದಲ್ಲಿ ಷರಾದಲ್ಲಿ ತಿಳಿಸಿರುವಂತೆ ಅಗತ್ಯ ಕ್ರಮಕೈಗೊಂಡು ಸ್ಪಷ್ಟ ಮಾಹಿತಿಗಳೊಂದಿಗೆ ಮರುಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ.

3. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯವಿದ್ದಲ್ಲಿ ಸೂಕ್ತ ಕ್ರಮಕ್ಕಾಗಿ

4. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಆದೇಶ ಹಾಗೂ ಅನುಬಂಧ-1, 2 ಮತ್ತು 3ಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.

**<u>ಪ್ರತಿಯನ್ನು :</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು -560 001 – ಮಾಹಿತಿಗಾಗಿ.
2. ವ್ಯವಸ್ಥಾಪಕರು/ಅಧೀಕ್ಷಕರು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು, ಸೇವಾ ವಿಭಾಗ-1, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

# ಕಾಲೇಜು ಶಿಕ್ಷಣ ಇಲಾಖೆ

## ಅನುಬಂಧ-1

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.**

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಖಾಯಂ ನೇಮಕಾತಿ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ಪಡೆದಿರುವ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ: ಎ.ಜಿ.ಪಿ | ಶಿಫಾರಸ್ಸು ಮಾಡಿರುವ ವಿವರ: ಅರ್ಹತಾ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ: ಆರ್ಥಿಕ ಸೌಲಭ್ಯಕ್ಕೆ ಅರ್ಹತೆ ಪಡೆದ ದಿನಾಂಕ | ಷರಾ |
|---|---|---|---|---|---|---|---|---|---|
| ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017 | | | | | | | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | ಭಾರತಿ ಬ್ಯಾಳಿ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಗದಗ | 05-09-2009 | 05-09-2009 | 7000 | 05-09-2015 | 08-12-2015 | ಆರ್.ಸಿ. ಪೂರೈಸಿದ ಮರು ದಿನಾಂಕ :08-12-2015 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 2 | ಶಿವಶರಣಪ್ಪ ಡಿ ರ್‍ಯಾಗಿ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಹಾಗಾಂವ ಕ್ರಾಸ್ (ತಾ) ಕಲಬುರಗಿ ಜಿಲ್ಲೆ | 07-07-2010 | 07-07-2010 | 7000 | 07-07-2016 | 07-07-2016 | ----------- |
| 3 | ಡಾ ಕಸ್ತೂರೆವ್ವ ಬಿ ದಳವಾಯಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಿತ್ತೂರ ಬೆಳಗಾವಿ | 28-10-2009 | 28-10-2009 | 7000 | 28-10-2015 | 28-10-2015 | ----------- |
| 4 | ಶ್ಯಾಮಲ ಎನ್ ಬಿ | ಗ್ರಂಥಪಾಲಕರು | ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬೆಂಗಳೂರು | 13-08-2010 | 13-08-2010 | 7000 | 13-08-2016 | 13-08-2016 | ----------- |
| 5 | ಯಶೋದಮ್ಮ ಜಿ | ಗ್ರಂಥಪಾಲಕರು | ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬೆಂಗಳೂರು | 02-07-2010 | 02-07-2010 | 7000 | 02-07-2016 | 02-07-2016 | ----------- |
| 6 | ಅಬ್ದುಲ್ ರಹೀಮಖಾನ್ ಜಮಾದಾರ | ಆಂಗ್ಲಭಾಷೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಡಗೇರಿ | 05-09-2009 | 05-09-2009 | 7000 | 05-09-2015 | 05-09-2015 | ----------- |

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂ :ಕಾಶಿಇ/52/ಸಿಎಎಸ್/ಬಡ್ತಿ/17-18/ಬಸ್ಥಾವಿ ದಿ:07.08.17ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

| | |
|---|---|
| | ಅನುಬಂಧ-1 |
| | **ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಹಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.** |
| | ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017 |

| 1 | 2 | 3 | 4 | 5 | 6 | 11 | 12 | 13 | 14 |
|---|---|---|---|---|---|---|---|---|---|
| 7 | ಮೇಘಾ ಎಸ್ ಚಲವಾದಿ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಡಗೇರಿ | 05-10-2009 | 05-10-2009 | 7000 | 05-10-2015 | 05-10-2015 | ----------- |
| 8 | ಪ್ರಿಯದರ್ಶಿನಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹನೂರು | 29-09-2009 | 29-09-2009 | 7000 | 29-09-2015 | 10-02-2017 | ಆರ್.ಸಿ. ಪೂರೈಸಿದ ಮರು ದಿನಾಂಕ :10-02-2017 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 9 | ವಾಣಿ ವಿ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹನೂರು | 09-09-2009 | 09-09-2009 | 7000 | 09-09-2015 | 17-02-2017 | ಆರ್.ಸಿ. ಪೂರೈಸಿದ ಮರು ದಿನಾಂಕ :17-02-2017 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 10 | ದೇವರಾಜಯ್ಯ ಹೆಚ್ ಆರ್ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುರುಗೋಡು | 28-06-2010 | 28-06-2010 | 7000 | 28-06-2016 | 28-06-2016 | ----------- |
| 11 | ಸೀಮಾ ಕೌಸರ್ ಹೆಚ್ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೊರಬ | 05-09-2009 | 05-09-2009 | 7000 | 05-09-2015 | 27-11-2015 | ಆರ್.ಸಿ. ಪೂರೈಸಿದ ಮರು ದಿನಾಂಕ :27-11-2015 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 12 | ಡಾ ಜಗದೀಶ ಬಿ ಹುಲ್ಲೂರ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಜೇಂದ್ರಗಡ | 21-02-2011 | 21-02-2011 | 7000 | 21-02-2017 | 21-02-2017 | ----------- |
| 13 | ಸುಬ್ರಮಣ್ಯ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಂಡಿನಶಿವರ | 28-06-2010 | 28-06-2010 | 7000 | 28-06-2016 | 28-06-2016 | ----------- |

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂ :ಕಾಶಿಇ/52/ಸಿಎಎಸ್/ಬಡ್ತಿ/17-18/ಬಸ್ಥಾವಿ ದಿ:07.08.17ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

## ಅನುಬಂಧ-1

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.**

ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017

| 1 | 2 | 3 | 4 | 5 | 6 | 11 | 12 | 13 | 14 |
|---|---|---|---|---|---|---|---|---|---|
| 14 | ಶ್ರೀನಿವಾಸ ಟಿ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಂಡಿನಶಿವರ | 25-06-2010 | 25-06-2010 | 7000 | 25-06-2016 | 25-06-2016 | ----------- |
| 15 | ಸ್ಮಿತಾ ಎಲ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಂಡಿನಶಿವರ | 03-09-2009 | 03-09-2009 | 7000 | 03-09-2015 | 03-09-2015 | ----------- |
| 16 | ಗುರುರಾಜ ಎ ನಾಗಲೀಕರ | ಗಣಕ ವಿಜ್ಞಾನ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುರುಮಠಕಲ್ | 03-09-2009 | 03-09-2009 | 7000 | 03-09-2015 | 03-09-2015 | ----------- |
| 17 | ಹನುಮಪ್ಪ ವಗ್ಗರ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆಂಭಾವಿ | 05-09-2009 | 05-09-2009 | 7000 | 05-09-2015 | 08-09-2016 | ಆರ್.ಸಿ. ಪೂರೈಸಿದ ಮರು ದಿನಾಂಕ :08-09-2016 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 18 | ಶೋಭಾ ಎನ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರೇಗಲ್ | 05-09-2009 | 05-09-2009 | 7000 | 05-09-2015 | 05-09-2015 | ----------- |
| 19 | ಕಾಂಚನಮಾಲಾ ಆರ್ ಪಾಟೀಲ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರೇಗಲ್ | 07-07-2010 | 07-07-2010 | 7000 | 07-07-2016 | 07-07-2016 | ----------- |
| 20 | ಅಂಜನಮೂರ್ತಿ ಕೆ ಎಚ್ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರೇಗಲ್ | 12-07-2010 | 12-07-2010 | 7000 | 12-07-2016 | 12-07-2016 | ----------- |
| 21 | ಲತಾ ಎನ್ ಕಿಲ್ಲೇದಾರ್ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರೇಗಲ್ | 03-09-2009 | 03-09-2009 | 7000 | 03-09-2015 | 03-09-2015 | ----------- |

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂ :ಕಾಶಿಇ/52/ಸಿಎಎಸ್/ಬಡ್ತಿ/17-18/ಬಸ್ಥಾವಿ ದಿ:07.08.17ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

| | ಅನುಬಂಧ-1 | | | | | | | | |
|---|---|---|---|---|---|---|---|---|---|
| | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ. | | | | | | | | |
| ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017 | | | | | | | | | |
| 1 | 2 | 3 | 4 | 5 | 6 | 11 | 12 | 13 | 14 |
| 22 | ಬಸವರಾಜ ಬಿ | ಗಣಿತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನರೇಗಲ್ | 08-09-2009 | 08-09-2009 | 7000 | 08-09-2015 | 08-09-2015 | ----------- |
| 23 | ನಾಗರಾಜು ಬಿ ಎಸ್ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅರಸೀಕೆರೆ | 01-07-2010 | 01-07-2010 | 7000 | 01-07-2016 | 01-07-2016 | ----------- |
| 24 | ಖಂಡೋಜಿ ಲಮಾಣಿ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಂಡಾಲಕಟ್ಟಿ | 28-06-2010 | 28-06-2010 | 7000 | 28-06-2016 | 28-06-2016 | ----------- |
| 25 | ತಿಪ್ಪೇಸ್ವಾಮಿ ಎ | ರಸಾಯನಶಾಸ್ತ್ರ | ಸರ್ ಎಂ ವಿ ಸರ್ಕಾರಿ ವಿಜ್ಞಾನ ಕಾಲೇಜು ಭದ್ರಾವತಿ | 03-09-2009 | 03-09-2009 | 7000 | 03-09-2015 | 03-09-2015 | ----------- |
| 26 | ಉಮೇಶ್ ಡಿ | ಗಣಕ ವಿಜ್ಞಾನ | ಸರ್ ಎಂ ವಿ ಸರ್ಕಾರಿ ವಿಜ್ಞಾನ ಕಾಲೇಜು ಭದ್ರಾವತಿ | 05-09-2009 | 05-09-2009 | 7000 | 05-09-2015 | 05-09-2015 | ----------- |
| 27 | ಹಾಲೇಶ್ ಟಿ ಜಿ | ಗಣಕ ವಿಜ್ಞಾನ | ಸರ್ ಎಂ ವಿ ಸರ್ಕಾರಿ ವಿಜ್ಞಾನ ಕಾಲೇಜು ಭದ್ರಾವತಿ | 03-09-2009 | 03-09-2009 | 7000 | 03-09-2015 | 03-09-2015 | ----------- |
| 28 | ಶಶಿಧರ ಬಿ | ಗಣಕ ವಿಜ್ಞಾನ | ಸರ್ ಎಂ ವಿ ಸರ್ಕಾರಿ ವಿಜ್ಞಾನ ಕಾಲೇಜು ಭದ್ರಾವತಿ | 03-09-2009 | 03-09-2009 | 7000 | 03-09-2015 | 03-09-2015 | ----------- |

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂ :ಕಾಶಿಇ/52/ಸಿಎಎಸ್/ಬಡ್ತಿ/17-18/ಬಸ್ಥಾವಿ ದಿ:07.08.17ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

| ಅನುಬಂಧ-1 | | | | | | | | | |
|---|---|---|---|---|---|---|---|---|---|
| ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/ ) ಮಂಜೂರು ಮಾಡಲಾಗಿರುವ ಪಟ್ಟಿ. | | | | | | | | | |
| ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017 | | | | | | | | | |
| 1 | 2 | 3 | 4 | 5 | 6 | 11 | 12 | 13 | 14 |
| 29 | ಸುರೇಂದ್ರ ಸಿ ಎಸ್ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹನೂರು | 20-07-2010 | 20-07-2010 | 7000 | 20-07-2016 | 20-07-2016 | ------------ |
| 30 | ಕುಮಾರಸ್ವಾಮಿ ಕೆ ಸಿ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಿಪ್ಪನ್‌ಪೇಟೆ | 09-07-2010 | 09-07-2010 | 7000 | 09-07-2016 | 09-07-2016 | ------------ |
| 31 | ವಿಜಯಲಕ್ಷ್ಮಿ ಪಾಟೀಲ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಲಸೂರು ಬಸವಕಲ್ಯಾಣ (ತಾ) ಬೀದರ್ ಜಿಲ್ಲೆ | 05-09-2009 | 05-09-2009 | 7000 | 05-09-2015 | 05-09-2015 | ------------ |

*(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

Swlpay

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

# ಕಾಲೇಜು ಶಿಕ್ಷಣ ಇಲಾಖೆ

## ಅನುಬಂಧ-2

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.7000/- ರಿಂದ ರೂ.8000/-) ಮಂಜೂರು ಮಾಡಲಾಗಿರುವ ಪಟ್ಟಿ.**

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಖಾಯಂ ಸೇವಾವಧಿ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | ಷರಾ |
|---|---|---|---|---|---|---|---|---|---|
| | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಆರ್ಥಿಕ ಸೌಲಭ್ಯಕ್ಕೆ ಅರ್ಹತೆ ಪಡೆದ ದಿನಾಂಕ | |
| **ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017** | | | | | | | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | ವೇದಶ್ರೀ ನಿಡ್ಯ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಂಟ್ವಾಳ | 19-08-2004 | 19-08-2004 | 8000 | 19-08-2015 | 30-09-2016 | 1. ರೂ. 7000/- ಎ.ಜಿ.ಪಿ. ಮಂಜೂರು ಮಾಡಿರುವ ದಿನಾಂಕ : 19.08.2010<br>2. ಆರ್.ಸಿ. ಪೂರೈಸಿದ ಮರು ದಿನಾಂಕ : 30.09.2016 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 2 | ಶಾರದಾ ಶಿವಪ್ರಸಾದ | ವಾಣಿಜ್ಯಶಾಸ್ತ್ರ | ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬೆಂಗಳೂರು | 17-07-2006 | 17-07-2006 | 8000 | 28-10-2016 | 28-10-2016 | ರೂ.7000/- ಎ.ಜಿ.ಪಿ. ಪಡೆದ ದಿನಾಂಕ : 28.10.2011 |
| 3 | ವಿನಯ್ ಕುಮಾರ್ ಪಿ ಎನ್ | ಗಣಿತಶಾಸ್ತ್ರ | ಹೆಚ್‌ಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಡುವಲಹಿಪ್ಪೆ | 24-12-2007 | 24-12-2007 | 8000 | 29-03-2017 | 29-03-2017 | ರೂ.7000/- ಎ.ಜಿ.ಪಿ. ಪಡೆದ ದಿನಾಂಕ : 29.03.2012 |
| 4 | ನಿತ್ಯಾನಂದ ಎನ್ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುಂದಾಪುರ | 08-07-2003 | 16-04-2006 | 8000 | 16-04-2017 | 16-04-2017 | ರೂ.7000/- ಎ.ಜಿ.ಪಿ. ಪಡೆದ ದಿನಾಂಕ : 16.04.2012 |
| 5 | ಡಾ ಭೂಷಣಂ ಎಂ | ಪ್ರಾಣಿಶಾಸ್ತ್ರ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು | 24-12-2007 | 24-12-2007 | 8000 | 24-12-2016 | 24-12-2016 | ರೂ.7000/- ಎ.ಜಿ.ಪಿ. ಪಡೆದ ದಿನಾಂಕ : 24.12.2011 |
| 6 | ಡಾ ಎಸ್ ಆರ್ ಶಿರಹಟ್ಟಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಡಗೇರಿ | 31-10-2003 | 31-10-2003 | 8000 | 31-10-2012 | 31-10-2012 | ರೂ.7000/- ಎ.ಜಿ.ಪಿ. ಪಡೆದ ದಿನಾಂಕ : 31.10.2007 |

*(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂಖ್ಯೆ :ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ ದಿನಾಂಕ : 07.08.2017ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

## ಕಾಲೇಜು ಶಿಕ್ಷಣ ಇಲಾಖೆ

### ಅನುಬಂಧ-3

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ರೂ.6000/- ರಿಂದ ರೂ. 7000/- ) ಹಾಗೂ (ರೂ.7000/- ರಿಂದ ರೂ.8000/-) ಮಂಜೂರಾತಿ ಸಂಬಂಧದಲ್ಲಿ ಮಾಹಿತಿಗಳು ಅಗತ್ಯವಿರುವವರ ಪಟ್ಟಿ**

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಖಾಯಂ ನೇಮಕಾತಿ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ವಿದ್ಯಾರ್ಹತೆ NET/SLET/ Ph.D/M.Phil | ಷರಾ |
|---|---|---|---|---|---|---|---|
| ಸಂಖ್ಯೆ : ಕಾಶಿಇ/52/ಸಿಎಎಸ್/ಬಡ್ತಿ/2017-18/ಬಸ್ಥಾವಿ, ದಿನಾಂಕ : 07.08.2017 | | | | | | | |
| 1 | 2 | 3 | 4 | 5 | 6 | 7 | 8 |
| 1 | ಕರಿಬಸವಯ್ಯ ಹೆಚ್ ಎಸ್ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಬ್ಬಿ | 12-07-2003 | 19-11-2012 | M.Phil. | ಸದರಿಯವರಿಗೆ ಯು.ಜಿ.ಸಿ. ವೇತನ ಶ್ರೇಣಿ ಮಂಜೂರು ಮಾಡಿರುವ ಸೇವಾ ಪುಸ್ತಕದ ಪುಟದ ಪ್ರತಿ ಹಾಗೂ ಕಛೇರಿ ಆದೇಶದ ಪ್ರತಿಯನ್ನು ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. |
| 2 | ಮಹದೇವ ಎಸ್ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಳ್ಳೇಗಾಲ | 14-07-2003 | 23-12-2007 | M.Phil. | ಸದರಿಯವರಿಗೆ ಯು.ಜಿ.ಸಿ. ವೇತನ ಶ್ರೇಣಿ ಮಂಜೂರು ಮಾಡಿರುವ ಸೇವಾ ಪುಸ್ತಕದ ಪುಟದ ಪ್ರತಿ ಹಾಗೂ ಕಛೇರಿ ಆದೇಶದ ಪ್ರತಿಯನ್ನು ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. |

*(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

Sd/-

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**